ಇ) ಮಾಡುವುದಾದಲ್ಲಿ ಕ್ಷೇತ್ರಗಳ ಪುನರ್ ವಿಂಗಡಣೆಗೆ ಎಷ್ಟು ಕಾಲಾವಕಾಶ ಬೇಕಾಗುತ್ತದೆ.

ಈ) ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿ ನಿಯಮಗಳಿಗೆ ತಿದ್ದುಪಡಿಗಳನ್ನು ತರಲು ಸರ್ಕಾರವು ಉದ್ದೇಶಿಸಿರುತ್ತದೆಯೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) -ಅದೇ-

ಇ) .-ಅದೇ-

ಈ) -ಅದೇ-

ಶಿಕಾರಿಪುರ ಪಟ್ಟಣದಲ್ಲಿ ಮಿನಿ ವಿಧಾನಸೌಧ.

216 - ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ ಪಟ್ಟಣದಲ್ಲಿ "ಮಿನಿ ವಿಧಾನ ಸೌಧ" ಕಟ್ಟಲು ಸರ್ಕಾರವು ತೀರ್ಮಾನಿಸಿದೆಯೇ?

ಆ) ಹಾಗಿದ್ದರೆ ಈ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಹೌದು.

ಆ) 45 ಲಕ್ಷ ರೂ. ಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಆದೇ ಸಂಖ್ಯೆ ಆರ್‌ಡಿ 78 ಡಬ್ಲ್ಯೂಬಿಆರ್ 90 ದಿನಾಂಕ 28-9-92 ರಲ್ಲಿ ನೀಡಿದ್ದು, ಈಗಾಗಲೇ ಗುತ್ತಿಗೆ ಸವಾಲನ್ನು ದಿನಾಂಕ 8-1-1993ಕ್ಕೆ ಕೊನೆದಿನವಾಗಿ ಆಹ್ವಾನಿಸಿದೆ. ಗುತ್ತಿಗೆ ಸವಾಲ್ ಅನುಮೋದನೆ ಆದಕೂಡಲೆ ಕಾರ್ಯ ಪ್ರಾರಂಭಿಸಲಾಗುವುದು.

ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಬಗ್ಗೆ

218 - ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯ್ತಿಗಳ ಚುನಾಯಿತ ಪ್ರತಿನಿಧಿಗಳ ಕಾಲಾವಧಿ ಮುಗಿದ ಮೇಲೆ ಈ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಮಾಡದೆ ಇರಲು ಕಾರಣವೇನು?

ಆ) ಈ ಸಂಸ್ಥೆಗಳಿಗೆ ಸಲಹಾ ಸಮಿತಿಗಳನ್ನು ನೇಮಿಸಲು ಸರ್ಕಾರಕ್ಕೆ ಉದ್ದೇಶವಿದೆಯೇ?

ಇ) ಇದ್ದಲ್ಲಿ ಈ ಕ್ರಮ ಜನತಂತ್ರ ವಿರೋಧಿ ಕ್ರಮ ಎಂಬುದು ಸರ್ಕಾರಕ್ಕೆ ತಿಳಿದಿಲ್ಲವೆ?

ಈ) ಅಂತಹಾ ಸಲಹಾ ಸಮಿತಿಯನ್ನು ನೇಮಿಸುವಂತಹ ಆಲೋಚನೆಯನ್ನು ಕೈಬಿಟ್ಟು ಸರ್ವೋಚ್ಚನ್ಯಾಯಾಲಯದ ತೀರ್ಮಾನದ ಪ್ರಕಾರ ಈ ಸಂಸ್ಥೆಗಳಿಗೆ ಯಾವ ದಿನಾಂಕದಂದು ಚುನಾವಣೆ ನಡೆಸಲಾಗುವುದು.